ನಿಶ್ಚಯವಾಗಿಯೂ ಧರ್ಮವು ಸರಳವಾಗಿದೆ. ಯಾರಾದರೂ ಧರ್ಮವನ್ನು ಕಠಿಣಗೊಳಿಸಲು ಪ್ರಯತ್ನಿಸಿದರೆ ಅದು ಅವನನ್ನು ಸೋಲಿಸದೆ ಬಿಡುವುದಿಲ್ಲ. ಆದ್ದರಿಂದ ಸರಿಯಾದುದನ್ನು ಅರಸಿರಿ, ಸಾಧ್ಯವಾದಷ್ಟು ಹತ್ತಿರವಾಗಿರಿ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನಿಶ್ಚಯವಾಗಿಯೂ ಧರ್ಮವು ಸರಳವಾಗಿದೆ.
ಯಾರಾದರೂ ಧರ್ಮವನ್ನು ಕಠಿಣಗೊಳಿಸಲು ಪ್ರಯತ್ನಿಸಿದರೆ ಅದು ಅವನನ್ನು ಸೋಲಿಸದೆ ಬಿಡುವುದಿಲ್ಲ. ಆದ್ದರಿಂದ ಸರಿಯಾದುದನ್ನು ಅರಸಿರಿ, ಸಾಧ್ಯವಾದಷ್ಟು ಹತ್ತಿರವಾಗಿರಿ ಮತ್ತು (ಪ್ರತಿಫಲದ) ಶುಭವಾರ್ತೆಯನ್ನು ಪಡೆಯಿರಿ; ಬೆಳಗ್ಗೆ, ಸಂಜೆ ಮತ್ತು ರಾತ್ರಿಯ ಕೊನೆಯ ಆಯಾಮದಲ್ಲಿ ಆರಾಧನೆ ಮಾಡುತ್ತಾ ಸಹಾಯವನ್ನು ಯಾಚಿಸಿರಿ." [صحيح] [رواه البخاري]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿವರಿಸುವುದೇನೆಂದರೆ,ಇಸ್ಲಾಂ ಧರ್ಮವನ್ನು ಎಲ್ಲಾ ವಿಷಯಗಳಲ್ಲೂ ಸರಳ ಮತ್ತು ಸುಗಮವಾಗಿರುವ ರೀತಿಯಲ್ಲಿ ನಿರ್ಮಿಸಲಾಗಿದೆ. ಅಶಕ್ತತೆಯ ಸಂದರ್ಭಗಳಲ್ಲಿ ಮತ್ತು ಅತ್ಯಗತ್ಯ ಸಂದರ್ಭಗಳಲ್ಲಿ ಸರಳತೆಗೆ ಹೆಚ್ಚು ಒತ್ತು ನೀಡಲಾಗಿದೆ. ಏಕೆಂದರೆ, ಮಿತತ್ವವನ್ನು ತೊರೆಯುವುದು ಮತ್ತು ಧಾರ್ಮಿಕ ವಿಷಯಗಳಲ್ಲಿ ಆಳವಾಗಿ ತೊಡಗಿಕೊಳ್ಳುವುದು ಅಶಕ್ತತೆಗೆ ಮತ್ತು ಕರ್ಮಗಳನ್ನು ಸಂಪೂರ್ಣವಾಗಿ ಅಥವಾ ಆಂಶಿಕವಾಗಿ ತೊರೆಯುವುದಕ್ಕೆ ಕಾರಣವಾಗುತ್ತದೆ. ನಂತರ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತೀವ್ರ ನಿಲುವನ್ನು ತೊರೆದು ಮಿತತ್ವವನ್ನು ಪಾಲಿಸಲು ಪ್ರೋತ್ಸಾಹಿಸುತ್ತಾರೆ. ಮನುಷ್ಯನು ತನಗೆ ಆದೇಶಿಸಲಾಗಿರುವ ವಿಷಯಗಳಲ್ಲಿ ಉಪೇಕ್ಷೆ ತೋರಬಾರದು ಮತ್ತು ತನಗೆ ಸಾಮರ್ಥ್ಯವಿಲ್ಲದ ವಿಷಯಗಳನ್ನು ತನ್ನ ಮೇಲೆ ಹೊರಿಸಬಾರದು. ಅವನು ಒಂದು ಕರ್ಮವನ್ನು ಪೂರ್ಣ ರೂಪದಲ್ಲಿ ನಿರ್ವಹಿಸಲು ಅಶಕ್ತನಾದರೆ ಅವನಿಗೆ ಸಾಧ್ಯವಾಗುವ ರೂಪದಲ್ಲಿ ಅದನ್ನು ನಿರ್ವಹಿಸಬೇಕು. ಕರ್ಮವನ್ನು ಪೂರ್ಣ ರೂಪದಲ್ಲಿ ನಿರ್ವಹಿಸಲು ಸಾಧ್ಯವಾಗದಿದ್ದರೂ ಸಹ, ಅವುಗಳನ್ನು ಕನಿಷ್ಟ ರೂಪದಲ್ಲಿ ನಿರಂತರವಾಗಿ ನಿರ್ವಹಿಸುವವರಿಗೆ ಹೇರಳ ಪ್ರತಿಫಲವಿದೆಯೆಂದು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಶುಭವಾರ್ತೆಯನ್ನು ತಿಳಿಸಿದ್ದಾರೆ. ಏಕೆಂದರೆ ಅಶಕ್ತತೆಗೆ ಅವರು ಕಾರಣರಲ್ಲವೆಂದಾದರೆ ಅದು ಅವರ ಪ್ರತಿಫಲದಲ್ಲಿ ಕಡಿತ ಉಂಟುಮಾಡುವುದಿಲ್ಲ. ಇಹಲೋಕವು ವಾಸ್ತವದಲ್ಲಿ ಪ್ರಯಾಣ ಮತ್ತು ಪರಲೋಕಕ್ಕೆ ಸಾಗುವ ಸ್ಥಳವಾಗಿರುವುದರಿಂದ, ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅತ್ಯಂತ ಉತ್ಸಾಹವಿರುವ ಈ ಮೂರು ಸಮಯಗಳಲ್ಲಿ ರೂಢಿಯಾಗಿ ಆರಾಧನೆ ಮಾಡಲು ಅಲ್ಲಾಹನಲ್ಲಿ ಸಹಾಯ ಬೇಡಬೇಕೆಂದು ನಮಗೆ ಆಜ್ಞಾಪಿಸಿದ್ದಾರೆ: ಒಂದು: 'ಗದ್ವ' ಅಂದರೆ ಮುಂಜಾನೆಯ ಸಮಯದಲ್ಲಿ ಆರಾಧಿಸುವುದು. ಇದು ಫಜ್ರ್ ನಮಾಝ್ ಮತ್ತು ಸೂರ್ಯೋದಯದ ನಡುವಿನ ಸಮಯವಾಗಿದೆ. ಎರಡು: 'ರೌಹ' ಅಂದರೆ ಮಧ್ಯಾಹ್ನದ ನಂತರದ ಸಮಯದಲ್ಲಿ ಆರಾಧಿಸುವುದು. ಮೂರು: 'ದುಲ್ಜ' ಅಂದರೆ ರಾತ್ರಿಯಲ್ಲಿ ಪೂರ್ಣವಾಗಿ ಅಥವಾ ಆಂಶಿಕವಾಗಿ ಆರಾಧಿಸುವುದು. ರಾತ್ರಿಯಲ್ಲಿ ಕರ್ಮವೆಸಗುವುದು ಹಗಲಲ್ಲಿ ಕರ್ಮವೆಸಗುವುದಕ್ಕಿಂತಲೂ ಕಷ್ಟವಾಗಿರುವುದರಿಂದ 'ದುಲ್ಜ'ದ ಒಂದು ಭಾಗದಲ್ಲಿ ಎಂದು ಹೇಳಲಾಗಿದೆ.


النجاة الخيرية
ALNAJAT CHARITY
لجنة الدعوة الإلكترونية
EDC E-Da'wah Committee